ಸೀಮಾ ಅಲ್ಕಲೀಸ್ ಸಂಸ್ಥೆಗಳು ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದು, ನಿಗಮವು ಈ ಸಂಸ್ಥೆಗಳಿಂದ ವಿದ್ಯುತ್ತನ್ನು ಖರೀದಿಸುತ್ತಿದೆ. ಅಲ್ಲದೇ ಸರ್ಕಾರವು ಕೋಜನರೇಷನ್, ಕಿರು ಜಲ ವಿದ್ಯುತ್ ಉತ್ಪಾದನೆ, ಗಾಳಿ ಆಧಾರಿತ ವಿದ್ಯುತ್ ಉತ್ಪಾದನೆ ಇವುಗಳಿಗೆ ಹೆಚ್ಚಿನ ಉತ್ತೇಜನ ನೀಡುತ್ತಿದ್ದು, ಖಾಸಗೀ ಕ್ಷೇತ್ರದಲ್ಲಿ ಈಗಾಗಲೇ ಸುಮಾರು 228 ಮೆ.ವ್ಯಾ. ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ.

2. ಇತ್ತೀಚೆಗೆ ಕರ್ನಾಟಕ ವಿದ್ಯುತ್ ನಿಗಮವು ಗೇರಸೊಪ್ಪ ಜಲ ವಿದ್ಯುತ್ ಉತ್ಪಾದನಾ ಯೋಜನೆಯ ಮೊದಲ 60 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಘಟಕವನ್ನು ಕಾರ್ಯೋನ್ಮುಖಗೊಳಿಸಿದ್ದು, ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುತ್ತದೆ.

3. ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ವೋಲ್ಟೇಜ್ ಸುಧಾರಣೆಗಾಗಿ ನಿಗಮವು ಪ್ರತಿ ವರ್ಷವೂ ಹೊಸ ವಿದ್ಯುತ್ ಸಬ್‌ಸ್ಟೇಷನ್‌ಗಳ ಸ್ಥಾಪನೆ, ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳ ನಿರ್ಮಾಣ, ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿ ಹೊಸ 11 ಕೆ.ವಿ. ಫೀಡರುಗಳ ನಿರ್ಮಾಣ, ಕೆಪಾಸಿಟರ್ ಬ್ಯಾಂಕ್‌ಗಳ ಸ್ಥಾಪನೆ, ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳ ಸ್ಥಾಪನೆ, ವಿದ್ಯುತ್ ಸಬ್‌ಸ್ಟೇಷನ್‌ಗಳಲ್ಲಿ ಹೆಚ್ಚುವರಿ ಪಾವರ್ ಟ್ರಾನ್ಸ್‌ಫಾರ್ಮರುಗಳನ್ನು ಅಳವಡಿಸುವುದು ಇತ್ಯಾದಿ ಸುಧಾರಣೆ ಕ್ರಮಗಳನ್ನು ನಿರ್ವಹಿಸುತ್ತಿದೆ. ಪ್ರತಿ ವರ್ಷವೂ ಸುಮಾರು 600 ರಿಂದ 700 ಕೋಟಿ ರೂ.ಗಳಷ್ಟು ವೆಚ್ಚ ಮಾಡುತ್ತಿದೆ. ಇವುಗಳ ನಿರ್ವಹಣೆಗೆ ಪಿಎಫ್‌ಸಿ. ಆರ್‌ಇಸಿ ಮುಂತಾದ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಸಹ ನಿಗಮವು ಪಡೆಯುತ್ತಿದೆ. ಈ ಸುಧಾರಣೆ ಕ್ರಮಗಳಿಗೆ ತಗಲುವ ವೆಚ್ಚವು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಈ ಕಾರ್ಯಗಳನ್ನು ಹಂತ ಹಂತವಾಗಿ ಆದ್ಯತೆಗನುಗುಣವಾಗಿ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ.

ಸಣ್ಣ ಉಳಿತಾಯ ರೂಪದಲ್ಲಿ ಸಂಗ್ರಹಿಸಲಾದ ಮೊತ್ತ:

19 (56) ಶ್ರೀ ಆಂಜನಮೂರ್ತಿ (ನೆಲಮಂಗಲ): ಮಾನ್ಯ ಸಣ್ಣ ಉಳಿತಾಯ, ಮುಜರಾಯಿ ಮತ್ತು ವಿಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 2000-01ನೇ ಸಾಲಿನಲ್ಲಿ ಸಣ್ಣ ಉಳಿತಾಯ ರೂಪದಲ್ಲಿ ಸರ್ಕಾರಕ್ಕೆ ಬಂದ ಮೊತ್ತವೆಷ್ಟು;

2) ಸಾರ್ವಜನಿಕರಿಂದ, ಸರ್ಕಾರಿ ಇಲಾಖೆಗಳಿಂದ ಬಂದ ಮೊತ್ತವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಬಾಬುರಾವ್ ಬಸವಣ್ಣ ಚಿಂಚನೂರು (ಸಣ್ಣ ಉಳಿತಾಯ ಮುಜರಾಯಿ ಹಾಗೂ ರಾಜ್ಯ ಸಚಿವರು)

1) 2000-01ನೇ ಸಾಲು (ಜನವರಿ 2001ರವರೆಗೆ) ಸರ್ಕಾರಕ್ಕೆ ಸಣ್ಣ ಉಳಿತಾಯ ರೂಪದಲ್ಲಿ ಸಂಗ್ರಹವಾದ ಮೊತ್ತ ಒಟ್ಟು ರೂ. 2751.02 ಕೋಟಿ ಮತ್ತು ನಿವ್ವಳ ರೂ. 1186.41 ಕೋಟಿಗಳು.

2) ಸಣ್ಣ ಉಳಿತಾಯ ಸಂಗ್ರಹಣೆ ಸಾರ್ವಜನಿಕರಿಂದ ಆಗುತ್ತಿದೆ. ಜಿಲ್ಲಾವಾರು ಸಂಗ್ರಹಣಾ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. (ಅಂಕಿ ಅಂಶಗಳನ್ನು ಅಂಚೆ ಕಛೇರಿವಾರು ಕ್ರೋಢೀಕರಿಸಲಾಗುವುದರಿಂದ, ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲ.

ANNEXURE

ACHIEVEMENT IN SMALL SAVINGS

(Rupees in Lakhs)

Sl. No.	District	Progressive Achievement from 1-4-2000 to 31-1-2001	
		Gross	Net
1.	Bangalore Urban	91554.58	40636.70
2.	Tumkur	5906.10	2103.66
3.	Kolar	9577.49	4699.21
4.	Bangalore Rural	5664.70	2421.22
5.	Shimoga	10596.24	5285.06
6.	Chitradurga	3818.95	1228.84
7.	Davanagere	4681.56	1843.37
8.	Chickmagalore	4370.67	1715.07
9.	Mysore	14292.00	5176.62
10.	Chamarajanagar	2040.46	979.81
11.	Mandya	4798.25	1990.80
12.	Hassan	6384.19	2993.48
13.	Dakshina Kannada	17462.12	7886.14
14.	Udupi	11649.71	5191.97
15.	Uttara Kannada	9441.69	4673.51
16.	Kodagu	2354.57	1144.36
17.	Belgaum	17824.58	6993.40
18.	Bijapur	5138.09	1846.47
19.	Bagalkote	4871.49	1952.39

Sl. No.	District	Progressive Achievement from 1-4-2000 to 31-1-2001	
		Gross	Net
20.	Dharwad	12201.05	5217.04
21.	Haveri	2937.71	1214.85
22.	Gadag	3516.91	1664.55
23.	Gulbarga	18323.34	3383.37
24.	Bidar	3410.10	1732.82
25.	Raichur	4322.77	1678.24
26.	Koppal	882.44	801.81
27.	Bellary	6080.44	2186.95
	Total	**275102.20**	**118641.71**

ಮುಜರಾಯಿ ಇಲಾಖೆಯಿಂದ ಗುಲ್ಬರ್ಗಾ ಜಿಲ್ಲೆಗೆ ಹಣ ಬಿಡುಗಡೆ:

21 (8) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಜೇವರ್ಗಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 2000-01ನೇ ಸಾಲಿನಲ್ಲಿ ರಾಜ್ಯದ ಮುಜರಾಯಿ ಇಲಾಖೆಗೆ ನಿಗದಿಪಡಿಸಿರುವ ಹಣವೆಷ್ಟು;

2) ಈ ಹಣದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟು ಮಂಜೂರಿಯಾಗಿ ಬಿಡುಗಡೆ ಮಾಡಲಾಗಿದೆ;

3) ಅದರಲ್ಲಿ ಗುಲ್ಬರ್ಗಾ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣ ಮಂಜೂರಿ ಮಾಡಿ ಬಿಡುಗಡೆ ಮಾಡಲಾಗಿದೆ;

4) ಗುಲ್ಬರ್ಗಾ ಜಿಲ್ಲೆಯಲ್ಲಿ ಮಂಜೂರಿಯಾಗಿರುವ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು; ತಾಲ್ಲೂಕುವಾರು/ದೇವಸ್ಥಾನವಾರು ವಿವರ ನೀಡುವುದು?

ಶ್ರೀ ಬಾಬುರಾವ್ ಬಸವಣ್ಣ ಚಿಂಚನೂರು (ಮುಜರಾಯಿ ರಾಜ್ಯ ಸಚಿವರು)

1) ಸರ್ಕಾರವು ಮುಜರಾಯಿ ಇಲಾಖೆಗೆ 2000-01ನೇ ಸಾಲಿನಲ್ಲಿ ಒದಗಿಸಿರುವ ಹಣದ ವಿವರ ಕೆಳಕಂಡಂತಿದೆ.

ಅ) ದುರಸ್ತಿ: ಜೀರ್ಣೋದ್ಧಾರ ರೂ. 1.26 ಕೋಟಿ

ಆ) ಹೊಸ ನಿರ್ಮಾಣ ರೂ. 1.50 ಕೋಟಿ

ಇ) ಆರಾಧನಾ ಯೋಜನೆ ರೂ. 5.00 ಕೋಟಿ